ಒಂದು ದಿನ ಹಟ್ಟೀಲಿ ಕೂಸು ಮಕ್ಕಂಡಿತ್ತು. ಅವ್ವ ಆಚೆ ಹೋಗಿದ್ಲು, ಮೇಲಿನ ಮನೆ ಅಯ್ಯರ ಮಗ ಬಂದು 'ಲೋ ಹುಡುಗ ಮನೆ ತವಕೆ ಬರಬೇಕಂತೆ' ಅಂದಿದ್ದೇ ಕಡ್ಡು ಹೊಂಟೋದ. ಏನೋ ಕೆಲಸ ಐತೆ ತಿಂಡಿನೂ ಸಿಕ್ಕುತ್ತೆ ಅಂತ ಅವನ ಹಿಂದಾಗಡೆಯೆ ಹೋದೆ. ಚರಂಡಿ ಕಟ್ಟಿಕೊಂಡಿತ್ತು, ಸರಿ ಕಸನೆಲ್ಲಾ ತಗ್ದು, ನೀರು ಸಲೀಸಾಗಿ ಹೋಗಂಗೆ ಮಾಡಿ, ಅವರು ಕೊಟ್ಟ ತಿಂಡಿ ತಿನ್ಕೋತಾ ಹಟ್ಟಿಗೆ ಬಂದೆ, ಅರೆ ಮಲಕ್ಕೊಂಡಿದ್ದ ಕೂಸು ಅಲ್ಲಿರಲಿಲ್ಲ, ಗಾಬರಿ ಆಯ್ತು, ಅಕ್ಕಪಕ್ಕ, ಓಣಿಲೆಲ್ಲಾ ಗಿರಗಿರನೆ ಸುತ್ತಾಡ್ದೆ. ಎಲ್ಲೂ ತಂಗವ್ವ ಕಾಣ್ತಾ ಇಲ್ಲ ಏನು ಮಾಡೋಕು ಗೊತ್ತಾಗದೆ ಅವ್ವನ ಹುಡುಕ್ಕೊಂಡು ಹೋದೆ. ಅವ್ವ ಸಾಹುಕಾರರ ಜಮೀನನಲ್ಲಿ ಕಳೆ ಕೀಳ್ತಾ ಇದ್ಲು, ಅವಳ ಅಕ್ಕಪಕ್ಕನೂ ತಂಗವ್ವ ಕಾಣ್ನಿಲ್ಲ. 'ಅವ್ವ' ಕರೆದೆ, ಅವಳು ಅಲ್ಲಿಂದಲೇ, 'ಏನ್ಲಾ' ಎಂದಳು. 'ವಸಿ ಇತ್ತ ಬಾ' ಎಂದೆ. 'ಅದೇನು ಹೇಳ್ಲಾ ನಂಗೆ ಕೇಮ್ ಐತೆ' ಎಂದಳು. 'ಅವ್ವೌ ಕೂಸು ಹಟ್ಟೀಲಿ ಕಾಣ್ತಾ ಇಲ್ಲ, ಎಲ್ಲಾ ಕಡೆನೂ ಹುಡುಕ್ದೆ ಕನ ಎಲ್ಲೂ ಕಾಣವಲ್ದು' ಕಿರ್ಚಿದೆ. ಗಾಬರಿಯಿಂದ ಅವ್ವ ಕೆಲಸವನ್ನು ಹಂಗೆ ಬಿಟ್ಟು ಓಡಿ ಬಂದು, 'ನೀ ಎಲ್ಲಿ ಹಾಳಾಗೋಗಿದ್ದೆ? ಮನೇಲಿ ಮಕ್ಕಂಡಿದ್ದ ಕೂಸು ಇಲ್ಲ ಅಂದರೆ ಯಾನ?' ಗಾಬರಿಯಾದ್ಲು, ಇಬ್ಬರೂ ಮನೆಯುತ್ತ ಓಡಿದೆವು. ತಡಿಕೆ ಬಾಗಿಲು ತಕ್ಕಂಡೇ ಇದೆ, ಒಳಗೆ ಕೂಸಿಲ್ಲ. ಮತ್ತೆ ಅವ್ವನ ಜೊತೆ ಎಲ್ಲರ ಮನೆ ಸಂಧಿ, ಓಣಿಲೆಲ್ಲಾ ಸುತ್ತಾಣಿದ್ವಿ ಎಲ್ಲೂ ಕಾಣಿಸ್ತಿಲ್ಲ. ಮೆಲ್ಲನೆ ರಾಗ ತೆಗೆದೆ, 'ಅವ್ವಾ ಅಪ್ಪ ಏನಾದ್ರು ಎತ್ತಕ್ಕಂಡು ಹೋದ್ನಾ' ರಾಗ ಎಳ್ದೆ. 'ಇರಬೇಕು ಕಣ್ಲಾ, ಆ ತಿರುಬೋಕಿ ಹೆಂಡಕ್ಕೆ ಯಾರಿಗಾದರೂ ಮಾರಿಕೊಂಡ್ನಾ ನಡಿ ಅಲ್ಲೇ ಹೋಗುಮ' ಅಂತ ನನ್ನ ಕೈ ಹಿಡಕೊಂಡು ದಪದಪ ಹೆಜ್ಜೆ ಹಾಕ್ತಾ ಅವ ಕೆಲಸ ಮಾಡೋ ಕಡೆ ಹೋದರೆ, 'ಅವ ಇವತ್ತು ಕೆಲಸಕ್ಕೆ ಬಂದೆ ಇಲ್ಲ' ಎಂದರು. ಊರಾಚೆ ಇರೋ ಹೆಂಡದಂಗಡಿಗೆ ಹೋದ್ರೆ, ಚಕ್ಕಂಬಕ್ಕಳ ಹಾಕಿ ಕೂತುಕೊಂಡು ಚಿಕನೆ ತಿನ್‌ತಾ ಗಳಾಸ್ ತುಂಬಾ ಹೆಂಡ ಸರ್‍ಕೊಂಡು ಸಂತೋಷವಾಗಿ 'ಭಲಲೇ ಭೀಮಾ' ಅಂತ ಹಾಡ್ತಾ ಕುಂತೌನೆ. ಅವ್ವ ಅಪ್ಪನ ಮುಂದೆ ನಿಂತ್ಕಂಡು, 'ಎಲ್ಲಾ ಕೂಸು?' ಅಬ್ಬರಿಸಿದಳು. 'ನಂಗೇನಮಿ ಗೊತ್ತು' 'ಅಂಗಾರೆ ಕುಡಿಯೋಕೆ ದುಡ್ಡು ಯಾವ ಬೇವರ್ಸಿ ಕೊಟ್ಟ? ಕೂಸು ಎಲ್ಲಿ ಯೋಳು, ಇಲ್ಲಾ ಅಂದ್ರೆ ನಿನ್ ಮೆಟ್ಟು ಇಸ್ಕಿ ಸಾಯಿಸಿ ಬುಡುತ್ತೀನಿ' ಎನ್ನುತ್ತಾ ಅಪ್ಪನ ಕೈಲಿದ್ದ ಗಳಾಸ್ ಕಿತ್ಕೊಂಡು ಪಟ್ಟನೆ ನೆಲಕ್ಕೆ ಅಪ್ಪಳಿಸಿದಳು. 'ಏಹ್ ಬಿಡಮಿ ನನ್ನ ತಂಟೆಗೆ ಬಂದರೆ ಹುಸಾರ್ ನಾನ್ ಸುಮ್ಕಿರಲ್ಲ'. 'ನನ್ನ ಕೂಸೆಲ್ಲಿ ಬೊಗಳು' ಎಂದವಳೆ ಅಪ್ಪನ್ನ ಎಳೆದಾಡಿ ಕೆಳಕ್ಕೆ ತಳ್ಳಿ ಕಾಲಲ್ಲಿ ಜಾಡಿಸಿ ಒದ್ಲು. ಅವನು ಕೆಳಗೆ ಬಿದ್ದು ಜೋರು ದನಿ ತೆಗೆದು ಅಳತೊಡಗಿದ. ಅಷ್ಟರಲ್ಲಿ ಜನ ಜಮಾಯಿಸಿದರು. ಎಲ್ಲರೂ ಅವ್ವನ್ನೇ ಬೈಯಕ್ಕೆ ಎರಕ್ಕಡ್ರು. ಕೂಸು ಕಾಣೆಯಾಗಿದ್ದನ್ನು ಅಲ್ಲಿಯ ಜನಕ್ಕೆ ಒಪ್ಪಿಸಿದಳು.

ಕೊನೆಗೂ ಕೂಸಿನ ಕಥೆ ಏನಾಯ್ತು ಅಂತ ಅವ ಬಾಯಿ ತೆರಿನಿಲ್ಲ. ಅವ್ವಂಗೂ ಮುಂದೇನು ಮಾಡಬೇಕಂತ ತಿಳೀಲಿಲ್ಲ. ಅತ್ತಕೋತ ಮನೆಗೆ ಬಂದು ಹಟ್ಟಿಯೋರಿಗೆಲ್ಲಾ ಒಪ್ಪಿಸಿದಳು. ಯಾರೂ ಏನೂ ಹೇಳ್ಲಿಲ್ಲ, ಗಂಡಸ್ರೆಲ್ಲಾ ತೂರಾಡ್ತಾ ಹೆಣ್ತರ್ನ ಬೈಕೋತಾ ಇದ್ರು. ಅವ್ವ, 'ಹೆಂಡ ಕುಡಿಯೋಕೆ ಕಾಸು ಬೇಕಲ್ಲ, ಅದಕ್ಕೆ ಕೂಸನ್ನೇ ಮಾರಿಕೊಂಡವ್ನೆ, ನೆಗೆದು ಬಿದ್ದು ಹೋಗ' ಹುಚ್ಚಿಯಂತೆ ಬಡಬಡಿಸಿದಳು, ಎಲ್ದು ದಿನ ಮಕಾಡೆ ಮಂಕ್ಕಂಡಿದ್ಲು, ಆಮೇಲೆ ವಟ್ಟೆ ಚುರುಗಟ್ಟಕ್ಕೆ ಅಚ್ಚಿಕೊತು, ಪಕ್ಕದ ಹಟ್ಟಿ ಬೀರವ್ವ ಬಂದು 'ಗೇಮೆ ಮಾಡಕ್ಕೋಗನ ಬಾ, ನಮ್ಮಂತ ಬಡವರಿಗೆ ಬರಿ ಕೈ ಬಾಯ್ಕೆಗೆ ಹೊಯ್ತದಾ?' ಅಂತ ಬಲವಂತ ಮಾಡಿ ಕೆಲಸಕ್ಕೆ ಎಳಕ್ಕೊಂಡು ಹೋದಳು.

ಒಂದೆರಡು ದಿನ ಅಪ್ಪ ಮನೆ ಕಡೆ ತಲೆ ಹಾಕ್ಲಿಲ್ಲ. ಆಮೇಲೆ ಮೆಲ್ಲನೆ ಬಂದ. ಅವ್ವ ಅಷ್ಟೇ ರೋಸದಿಂದ ಬೈದ್ಲು, ಉಗದ್ಲು, ಪರಕೆ ತಗೊಂಡು ಬಾರ್ಸಿದ್ಲು ಆದ್ರೂನೂವೆ ಅವ ಕೂಸನ್ನು ಏನು ಮಾಡ್ದ ಅಂತ ಬಾಯಿ ಬಿಡ್ಲಿಲ್ಲ. ಆಮೇಲೆ ಎಲ್ಲಾ ಮಾಮೂಲಿನಂತೆ ಆಯ್ತು. ಅಪ್ಪ ತಂಗೀನ ಯಾರಿಗೆ ಕೊಟ್ಟ? ಕೂಸು ಎಲ್ಲೈತೋ ಏನು ಕಥೆನೋ? ಅಪ್ಪ ಕಾಸಿಗೆ ಮಾರಿಕೊಂಡದ್ದು ನಿಜಾನಾ? ಪ್ರಶ್ನೆಗಳು ಒಂದರ ಮೇಲೊಂದರಂತೆ ಕಾಡತೊಡಗಿದವು. ಈಗ ನಾನು ಹಟ್ಟೀಲಿ ಯಾಕಿರ್ಬೇಕು? ಕಾದ್ಕೊಂಡಿರೋಕೆ ಕೂಸೆ